**ಕರ್ನಾಟಕ ವಿಧಾನ ಪರಿಷತ್ತು**

**ನೂರ ಐವತ್ತೊಂಭತ್ತನೆಯ ಅಧಿವೇಶನ**

**ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2026**

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–27)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 19ರ ತಿದ್ದುಪಡಿ.-** ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ರ 19ನೇ ಪ್ರಕರಣದ, (4)ನೇ ಉಪ-ಪ್ರಕರಣ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(5) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ರ ಪ್ರಾರಂಭದ ದಿನಾಂಕದಿಂದ ಪ್ರಾರಂಭಗೊಂಡು ಮತ್ತು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ನಿಯಮಗಳು, 2026ರ ಅಧಿಸೂಚನೆಯ ದಿನಾಂಕದವರೆಗೆ ಮುಕ್ತಾಯಗೊಳ್ಳುವ ನಿಕಟಪೂರ್ವ ಅವಧಿಯಲ್ಲಿ ಆರಂಭಗೊಂಡ ಪ್ರಾಜೆಕ್ಟುಗಳ ಸಂದರ್ಭದಲ್ಲಿ, ಅಂಥ ಪ್ರಾಜೆಕ್ಟುಗಳಿಗೆ ಸಂಬಂಧಿಸಿದಂತೆ ಕೈಗೊಂಡ ಎಲ್ಲಾ ನಿರ್ಧಾರಗಳು, ಸಿದ್ಧಪಡಿಸಿದ ಯೋಜನೆಗಳು, ಕೈಗೊಂಡ ಕಾರ್ಯಾಚರಣೆಗಳು ಮತ್ತು ಬಾಕಿ ಇರುವ ವ್ಯವಹರಣೆಗಳನ್ನು ಈ ಅಧಿನಿಯಮದ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ, ಸಿದ್ಧಪಡಿಸಲಾಗಿದೆ, ಕೈಗೊಳ್ಳಲಾಗಿದೆ ಅಥವಾ ಸಂದರ್ಭಾನುಸಾರ ಆರಂಭಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
**(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)**

ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಯನ್ನು ನಿವಾರಿಸಲು ತಕ್ಷಣದ ಮತ್ತು ತುರ್ತು ಅಗತ್ಯವಿರುವ ಹಿನ್ನೆಲೆಯಲ್ಲಿ ಹಾಗೂ ಏರುತ್ತಿರುವ ಸಂಚಾರಿ ದಟ್ಟಣೆಯ ಸವಾಲುಗಳನ್ನು ಪರಿಹರಿಸಲು ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ 06)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಿ. ಕೆ. ಶಿವಕುಮಾರ್**
ಮುಖ್ಯ ಮಂತ್ರಿ

**ಜ್ಯೋತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ವಿಧೇಯಕ, 2022

## (2023ರ ಕರ್ನಾಟಕ ಅಧಿನಿಯಮ 06)ರ ಉದ್ಧೃತ ಭಾಗ.

**XXX XXX XXX**

**19. ಪ್ರಮುಖ ನಗರ ಸಾರಿಗೆ ಯೋಜನೆಗಳನ್ನು ಅನುಮೋದಿಸುವ ಅಧಿಕಾರ.-** (1) ಪ್ರಾಧಿಕಾರವು, ಸಮಗ್ರ ಸಂಚಾರ ಯೋಜನೆಯ ಸುಸ್ಥಿರತೆಗಾಗಿ ಮತ್ತು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಕಾಲಬದ್ಧ ವಿಧಾನದಲ್ಲಿ ನಗರ ಸಾರಿಗೆ ಏಜೆನ್ಸಿಗಳು, ಮೂಲಸೌಕರ್ಯ ಅಭಿವೃದ್ಧಿ ಏಜೆನ್ಸಿಗಳು ಮತ್ತು ಸಂಚಾರ ನಿರ್ವಹಣಾ ಏಜೆನ್ಸಿಗಳು ಅಥವಾ ರಾಜ್ಯ ಸರ್ಕಾರದ ಅಡಿಯಲ್ಲಿನ ಯಾವುದೇ ಇತರೆ ಏಜೆನ್ಸಿಗಳು ಅಥವಾ ಯಾವುದೇ ಸ್ಥಳೀಯ ಸರ್ಕಾರಿ ಏಜೆನ್ಸಿ ಇವುಗಳ ಮೂಲಕ ನಗರ ಸಂಚಾರ ಪ್ರದೇಶ ಅಥವಾ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿದ ಎಲ್ಲ ಪ್ರಮುಖ ನಗರ ಸಾರಿಗೆ ಯೋಜನೆಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ರಾಜ್ಯ ಸರ್ಕಾರದ ಅಡಿಯಲ್ಲಿನ ಯಾವುದೇ ಪ್ರಾಧಿಕಾರ, ಏಜೆನ್ಸಿ, ಇಲಾಖೆಯು, ಪ್ರಾಧಿಕಾರದ ಪೂರ್ವಾನುಮೋದನೆಯನ್ನು ಪಡೆಯದೆ ಸಂಬಂಧಿಸಿದ ನಗರ ಸಂಚಾರದ ಯಾವುದೇ ಸಾರ್ವಜನಿಕ, ಖಾಸಗಿ, ಅಥವಾ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಯೋಜನೆಯನ್ನು ಪ್ರಾರಂಭಿಸತಕ್ಕದ್ದಲ್ಲ. ನಿಯತ ಆಯವ್ಯಯ ಹಂಚಿಕೆಗಳು, ಯಾವುದೇ ಬಾಹ್ಯ ಸಹಾಯ ನಿಧಿಯನ್ನು ಹಾಗೂ ಕೇಂದ್ರ ಸರ್ಕಾರದ ಪ್ರಾಯೋಜಿತ ನಿಧಿಯೂ ಸೇರಿದಂತೆ, ರಾಜ್ಯ ಸರ್ಕಾರದಿಂದ ಯಾವುದೇ ಹಣಕಾಸಿನ ನೆರವನ್ನು ಕೋರುವುದಕ್ಕೆ ಪ್ರಾಧಿಕಾರದ ಅನುಮೋದನೆ ಪಡೆಯುವುದು ಅಗತ್ಯವಾಗಿರತಕ್ಕದ್ದು.

(3) ಯಾವುದೇ ಯೋಜನೆಯ ಅನುಮೋದನೆಗಾಗಿ (1)ನೇ ಉಪ-ಪ್ರಕರಣದ ಮೇರೆಗೆ ಕೋರಿಕೆಯನ್ನು ಸ್ವೀಕರಿಸಿದ ತರುವಾಯ, ಪ್ರಾಧಿಕಾರವು, ವಿನಿಯಮಗಳಲ್ಲಿ ಅಗತ್ಯಪಡಿಸಿದಂಥ ವಿಚಾರಣೆಯನ್ನು ಕೈಗೊಳ್ಳತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದಂಥ ಕೋರಿಕೆಗೆ ಮಂಜೂರಾತಿಯನ್ನು ನೀಡಬಹುದು ಅಥವಾ ನಿರಾಕರಿಸಬಹುದು:

ಪರಂತು, ಪ್ರಾಧಿಕಾರವು ಕೋರಿಕೆಗೆ ಅನುಮೋದನೆಯನ್ನು ನೀಡುವಾಗ ಕೆಲವು ಷರತ್ತುಗಳನ್ನು ವಿಧಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು.

(4) ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರಿಯು (3)ನೇ ಉಪ-ಪ್ರಕರಣದ ಮೇರೆಗೆ ನೀಡಿದ ನಿರ್ಣಯಕ್ಕೆ ತದ್ವಿರುದ್ಧವಾಗಿ ಯಾವುದೇ ಕಾರ್ಯವನ್ನು ಕೈಗೊಂಡ ಸಂದರ್ಭದಲ್ಲಿ ಅಥವಾ ಇದಕ್ಕೆ ಪ್ರಾಧಿಕಾರದ ಅನುಮೋದನೆಯು ಇಲ್ಲದಿರುವಲ್ಲಿ, ಪ್ರಾಧಿಕಾರವು, ಅಂಥ ನಿರ್ಣಯ ಅಥವಾ ಅನುಮೋದನೆಗೆ ತದ್ವಿರುದ್ಧವಾಗಿ ಕೈಗೊಂಡ ಯಾವುದೇ ಅಭಿವೃದ್ಧಿ ಕಾರ್ಯವನ್ನು ಕೆಡವಲು, ನೆಲಸಮಗೊಳಿಸಲು ಅಥವಾ ತೆಗೆದುಹಾಕಲು ಅಂಥ ಏಜೆನ್ಸಿಗಳಿಗೆ ನಿರ್ದೇಶಿಸತಕ್ಕದ್ದು ಮತ್ತು ಅಂಥ ಏಜೆನ್ಸಿಗಳು, ಸಂಬಂಧಪಟ್ಟ ವ್ಯಕ್ತಿಯಿಂದ ಅಥವಾ ಪ್ರಾಧಿಕಾರಿಯಿಂದ ಅಂಥ ಕೆಡವುವಿಕೆ, ನೆಲಸಮಗೊಳಿಸುವಿಕೆ ಅಥವಾ ತೆಗೆದುಹಾಕುವಿಕೆಗೆ ತಗುಲಿದ ಖರ್ಚನ್ನು ವಸೂಲಿ ಮಾಡತಕ್ಕದ್ದು.

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 350, 22ನೇ ಆಗಸ್ಟ್ 2026